ಇ) ಹಾಗಿದ್ದಲ್ಲಿ ವಿಚಾರಣೆ ಯಾವ ಹಂತದಲ್ಲಿದೆ? ಯಾರನ್ನು ನೇಮಕ ಮಾಡಲಾಗಿದೆ?

ಈ) ಸಮರ್ಪಕವಾಗಿ ಬಳಕೆಯಾಗದಿರುವುದಕ್ಕೆ ಯಾರನ್ನು ಹೊಣೆಗಾರರನ್ನಾಗಿಸಲಾಗಿದೆ. ಅವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಸಮರ್ಪಕವಾಗಿ ಬಳಕೆಯಾಗಿದೆ. ನಿಗದಿತ ಗುರಿ ಸಾಧಿಸುವಲ್ಲಿ ಅಲ್ಲಿ-ಇಲ್ಲಿ ಅಲ್ಪಸ್ವಲ್ಪ ವೆಚ್ಚ ಮಾಡುವುದರಲ್ಲಿ ಹಣ ವಿಳಂಬಗತಿ ಕಡಿಮೆಯಾಗಿರುವುದನ್ನು ದಿನಾಂಕ 31-3-99 ಕ್ಕೆ ಅಂತ್ಯಗೊಳ್ಳುವ ಹಣಕಾಸು ವರ್ಷದ ಸಿ.ಎ.ಜಿ. ವರದಿಯಲ್ಲಿ ಕಂಡುಬಂದಿದೆ. ಇದಲ್ಲದೆ ಇನ್ನು ಕೆಲವು ನ್ಯೂನತೆಗಳನ್ನು ವರದಿಯಲ್ಲಿ ಹೇಳಲಾಗಿದೆ.

ಆ) ವರದಿಯಲ್ಲಿನ ನ್ಯೂನತೆಗಳನ್ನು ಗಮನಿಸಬೇಕೆಂದು ತಿಳಿಸಿದ್ದಾರೆ.

ಇ) ಆದರೆ ಸರ್ಕಾರ ಸಾಂಪ್ರದಾಯಿಕವಾಗಿ ವರದಿಯಲ್ಲಿನ ನ್ಯೂನತೆಗಳನ್ನು ಗಮನಿಸಿ ಕ್ರಮ ತೆಗೆದುಕೊಳ್ಳುವುದು ವಾಡಿಕೆ. ಈ ರೀತಿ ಸರ್ಕಾರ ಕ್ರಮ ತೆಗೆದುಕೊಳ್ಳುವುದು.

ಈ) ಈ ಹಂತದಲ್ಲಿ ಉದ್ಭವಿಸುವುದಿಲ್ಲ.

ಜೋಗ ಜಲಪಾತವನ್ನು ಪ್ರವಾಸಿ ಅಭಿವೃದ್ಧಿ ಕೇಂದ್ರವನ್ನಾಗಿ ಮಾರ್ಪಡಿಸುವುದರ ಕುರಿತು

3098 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಪ್ರವಾಸೋದ್ಯಮ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವವಿಖ್ಯಾತಿಯ ಪ್ರವಾಸಿ ಸ್ಥಳವಾದ ಜೋಗ್ ಜಲಪಾತದಲ್ಲಿ ಪ್ರವಾಸಿ ಅಭಿವೃದ್ಧಿ ಕೇಂದ್ರವನ್ನಾಗಿ ಮಾರ್ಪಡಿಸುವಲ್ಲಿ ಸರ್ಕಾರವು ಹಮ್ಮಿಕೊಂಡಿರುವ ಯೋಜನೆಗಳೇನು?

ಆ) ಈ ಯೋಜನೆಗೆ ನಿಗದಿಪಡಿಸಿರುವ ಮೊತ್ತವೆಷ್ಟು?

ಇ) ಹಾಲಿ ಇರುವ ಜೋಗ್ ಅಭಿವೃದ್ಧಿ ಪ್ರಾಧಿಕಾರದ ಕಾರ್ಯ ಯೋಜನೆಗಳೇನು? ಕಾರ್ಯವಿಧಾನಗಳಾವುವು?

ಈ) ಜೋಗದ ಸರ್ವತೋಮುಖ ಅಭಿವೃದ್ಧಿಗಾಗಿ ನಿಗಮವನ್ನು ಸ್ಥಾಪಿಸುವ ಯೋಜನೆ ಸರ್ಕಾರಕ್ಕಿದೆಯೇ?

ಉ) ಇದ್ದಲ್ಲಿ ಅಭಿವೃದ್ಧಿ ಯೋಜನೆಯ ಉಸ್ತುವಾರಿಯು ಯಾವ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತದೆ? (ವಿವರ ನೀಡುವುದು)

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಹಾಗೂ ಹಜ್ ಸಚಿವರು) :

ಅ) 1. ಜೋಗ್ ಹಾಗೂ ಸುತ್ತಮುತ್ತಲಿನ ಅಭಿವೃದ್ಧಿ ಪ್ರದೇಶದ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರವು ಒಂದು ಮಾಸ್ಟರ್ ಪ್ಲಾನನ್ನು ತಯಾರಿಸಿದೆ.

2. ಈ ಮಾಸ್ಟರ್ ಪ್ಲಾನನ್ನು ಅನುಷ್ಠಾನಗೊಳಿಸಲು ಜೋಗ್ ಅಭಿವೃದ್ಧಿ ನಿಗಮವನ್ನು ರಚಿಸಲು ಸರ್ಕಾರವು ತೀರ್ಮಾನಿಸಿರುತ್ತದೆ.

3. ನಿಗಮ ರಚನೆಯಾಗುವವರೆಗೂ ಹಾಲಿ ಇರುವ ಜೋಗ್ ಅಭಿವೃದ್ಧಿ ಸಮಿತಿಯು ಈ ನಿಟ್ಟಿನಲ್ಲಿ ಆಗಬೇಕಾದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಗಮನ ನೀಡುತ್ತಿದೆ.

4. ಈ ಪ್ರಾಥಮಿಕ ಕೆಲಸಗಳನ್ನು ಪ್ರಾರಂಭಿಸಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಕಾರ್ಯಕಾರಿ ಸಮಿತಿಯನ್ನು ರಚನೆ ಮಾಡಲಾಗಿದೆ.

ಆ) ರೂ. 100.00 ಲಕ್ಷಗಳು.

ಇ) 1. ಪ್ರಾಥಮಿಕ ಕೆಲಸಗಳಿಗೆ ಗಮನ ನೀಡುವುದು ಹಾಗೂ ಕಾರ್ಯಗತಗೊಳಿಸುವುದು.

2. ಮೈಸೂರಿನ ಬೃಂದಾವನ ತೋಟದ ಮಾದರಿಯಲ್ಲಿ ಡ್ಯಾಂ ಬಳಿ ಉದ್ಯಾನವನವನ್ನು ಅಭಿವೃದ್ಧಿಗೊಳಿಸುವುದು.

3. ಶರಾವತಿಯ ಹಿನ್ನೀರಿನಲ್ಲಿ ಸಾಹಸ ಕ್ರೀಡೆಗಳು ಹೌಸ್‌ಬೋಟ್ (ದೋಣಿ ಮನೆ) ಗಳನ್ನು ಅಭಿವೃದ್ಧಿ ಪಡಿಸುವುದು.

ಈ) ಹೌದು.

ಉ) ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ಕಾರ್ಯಕ್ರಮಗಳು

3100 - ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಮೀನುಗಾರಿಕೆ ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಬಯಲುಸೀಮೆ ಅಭಿವೃದ್ಧಿ ಮಂಡಳಿಯಿಂದ 2000-01ನೇ ಸಾಲಿನಲ್ಲಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಬಿಡುಗಡೆಯಾಗಿರುವ ಒಟ್ಟು ಹಣವೆಷ್ಟು?

ಇ) ಮಂಡಳಿಯು ಒಟ್ಟು ಎಷ್ಟು ಕಾಮಗಾರಿಗಳನ್ನು ಮಂಜೂರಾತಿ ಕೊಟ್ಟಿದೆ? ಇದಕ್ಕೆ ತೊಡಗಿಸಿರುವ ಹಣ ಎಷ್ಟು?

ಇ) ಹಳೆಯ ಮತ್ತು ಹೊಸ ಕಾಮಗಾರಿಗಳೆಷ್ಟು ಅದಕ್ಕೆ ಬಿಡುಗಡೆಯಾಗಿರುವ ಹಣ ಎಷ್ಟು?

ಈ) ಈ ಮಂಡಳಿ ನಬಾರ್ಡ್‌ನಿಂದ ಹಣ ತೆಗೆದುಕೊಳ್ಳಲು ಪ್ರಸ್ತಾವನೆ ಇದೆಯೇ ಹಾಗಾದಲ್ಲಿ ಇದರ ರೂಪರೇಖೆಗಳೇನು?

ಶ್ರೀ ಬಿ. ರಮಾನಾಥ್ ರೈ (ಮೀನುಗಾರಿಕೆ ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು) :

ಆ) 2000-01ನೇ ಸಾಲಿನಲ್ಲಿ ಆಡಳಿತಾತ್ಮಕ ವೆಚ್ಚಕ್ಕಾಗಿ ರೂ. 30.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.